ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೨೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

**ಮಂಗಳವಾರ, ದಿನಾಂಕ: ೨೨ನೇ ಜುಲೈ, ೨೦೧೪**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ಮಳೆ, ಗಾಳಿಯಿಂದ ಮಾವು ಬೆಳೆಗಾರರಿಗೆ ಆಗಿರುವ ನಷ್ಟ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೩೧೬ (೧೬೫೫) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯ ಎಷ್ಟು ವಿಸ್ತೀರ್ಣದಲ್ಲಿ ಮಾವಿನ ಬೆಳೆಯನ್ನು ಬೆಳೆಯಲಾಗುತ್ತಿದೆ ;

(ಆ) ಪ್ರಸಕ್ತ ಸಾಲಿನಲ್ಲಿ ಮಳೆ ಹಾಗೂ ಗಾಳಿಯಿಂದ ಮಾವು ಬೆಳೆಗಾರರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಅದರ ವಿವರಗಳನ್ನು ನೀಡುವುದು ;

(ಈ) ಅಂತಹ ಮಾವಿನ ಬೆಳೆಗಾರರಿಗೆ ಸರ್ಕಾರದಿಂದ ಬಂದಿರುವ ನೆರವೆಷ್ಟು ?

## ಚತುಷ್ಪಥ ರಸ್ತೆಗೆ ಭೂಸ್ವಾಧೀನ ಪ್ರಕ್ರಿಯೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೩೧೭ (೧೭೩೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪುರ ಹಾಗೂ ಜೇವರ್ಗಿ ಮಧ್ಯೆ ಇರುವ ರಾಷ್ಟ್ರೀಯ ಹೆದ್ದಾರಿಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡುವ ಯೋಜನೆ ಇದೆಯೇ ;

(ಆ) ಇದ್ದರೆ, ಆ ಕಾರ್ಯ ಯಾವ ಹಂತದಲ್ಲಿದೆ ;

(ಇ) ಈ ನಿಟ್ಟಿನಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಬೇಕಾಗುವ ಜಮೀನು ಎಷ್ಟು ; ಯಾವ ಬೆಲೆಯಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲಾಗುವುದು ?

## ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೩೧೮ (೧೭೨೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರ್ವಜನಿಕ ಉದ್ದಿಮೆಗಳ ಸಮಿತಿಯು ಕಳೆದ ೫ ವರ್ಷಗಳಿಂದೀಚೆಗೆ ಸಲ್ಲಿಸಿದ ವರದಿಯಂತೆ ನಷ್ಟದಲ್ಲಿರುವ ಉದ್ದಿಮೆಗಳು ಯಾವುವು ; ನಷ್ಟ ಆರ್ಥಿಕ ಮುಗ್ಗಟ್ಟಿನಿಂದಾಗಿದೆಯೋ ಅಥವಾ ಅಧಿಕಾರಿಗಳಿಂದಾಗಿದೆಯೋ ವಿವರ ನೀಡುವುದು ;

(ಆ) ಈ ನಷ್ಟದಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹೊರೆ ಉಂಟಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಹೊರೆ ಉಂಟಾಗಿದೆ ; ಇದರ ಬಗ್ಗೆ ಸಿ.ಎ.ಜಿ. ವರದಿ ಏನು ಶಿಫಾರಸ್ಸು ಮಾಡಿದೆ ; (ವಿವರ ನೀಡುವುದು)

(ಇ) ಸದರಿ ಉದ್ದಿಮೆಗಳ ನಷ್ಟದ ಪ್ರಮಾಣವೆಷ್ಟು ; ಅದಕ್ಕೆ ಹೊಣೆಗಾರರು ಯಾರು ; ಅವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ನಿಯಮಿತದಲ್ಲಿರುವ ಠೇವಣಿದಾರರ ಹಣವನ್ನು ಹಿಂತಿರುಗಿಸುವುದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೧೯ (೧೭೨೪) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ನಿಯಮಿತವು ತನ್ನ ವ್ಯವಹಾರವನ್ನು ಸ್ಥಗಿತಗೊಳಿಸಲು ಕಾರಣವೇನು ;

(ಆ) ಸದರಿ ಬ್ಯಾಂಕಿನ ಹಾಸನ ಶಾಖಾ ಕಟ್ಟಡವನ್ನು ಹರಾಜು ಮಾಡಲು ಪ್ರಕಟಣೆ ನೀಡಿದ್ದು, ಕಡಿಮೆ ಬೆಲೆಗೆ ಮಾರಾಟವಾಗುವ ಸಂಭವವಿರುವುದರಿಂದ ಸರ್ಕಾರ ಮಧ್ಯ ಪ್ರವೇಶಿಸಲು ಕ್ರಮ ಕೈಗೊಂಡಿದೆಯೇ ;

(ಇ) ಈ ಬ್ಯಾಂಕಿನಲ್ಲಿರುವ ಠೇವಣಿದಾರರ ಹಣವನ್ನು ಹಿಂದಿರುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೀದರ್ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೩೨೦ (೧೭೪೧) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ/ಖಾಸಗಿ ಸಕ್ಕರೆ ಕಾರ್ಖಾನೆಗಳೆಷ್ಟು ; (ಅವುಗಳ ಮಾಹಿತಿ ನೀಡುವುದು)

(ಆ) ಕಾರ್ಖಾನೆಗಳ ಸ್ಥಿರಾಸ್ತಿಯೇನು ; ಲಾಭ/ನಷ್ಟ ಎಷ್ಟೆಷ್ಟು ; (ಪ್ರತ್ಯೇಕ ಕಾರ್ಖಾನೆಗಳವಾರು ವಿವರ ನೀಡುವುದು)

(ಇ) ಇಲ್ಲಿಯವರೆಗೆ ರೈತರಿಗೆ ಕೊಡಬೇಕಾದ ಬಾಕಿ ಹಣವೆಷ್ಟು ; (ಪ್ರತ್ಯೇಕ ಕಾರ್ಖಾನೆಗಳವಾರು ಮಾಹಿತಿ ನೀಡುವುದು)

(ಈ) ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಸರ್ಕಾರದಿಂದ ಕೊಡಬೇಕಾದ ರೂ. ೧೫೦/– ರಂತೆ ಪ್ರತಿ ಟನ್ನಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ಕಾರ್ಖಾನೆಗಳವಾರು)

(ಉ) ಸರ್ಕಾರವು ಘೋಷಿಸಿರುವಂತೆ ಕಬ್ಬಿನ ಬೆಲೆ ರೂ. ೨೨೦೦/– ಪ್ರತಿ ಟನ್ನಿಗೆ ನೀಡಲಾಗಿದೆಯೇ ; ಇನ್ನು ಎಷ್ಟು ಹಣ ಪಾವತಿ ಆಗಬೇಕಾಗಿದೆ ; ಅದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಭತ್ತಕ್ಕೆ ಬೆಂಬಲ ಬೆಲೆ ಹೆಚ್ಚಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೧ (೧೭೨೦) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಭತ್ತ ಬೆಳೆಯುವ ಪ್ರದೇಶವೆಷ್ಟು ; (ತಾಲ್ಲೂಕುವಾರು, ಜಿಲ್ಲಾವಾರು, ಪೂರ್ಣ ವಿವರ ನೀಡುವುದು)

(ಆ) ಒಟ್ಟು ಉತ್ಪಾದನೆಯಾಗುವ ಭತ್ತವೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ಯಾವ ಯಾವ ಭತ್ತದ ತಳಿಗಳನ್ನು ಗುರುತಿಸಲಾಗಿದೆ ; (ವಿವರ ನೀಡುವುದು)

(ಈ) ಬೇಡಿಕೆ ಇರುವ ಭತ್ತದ ತಳಿಗಳು ಯಾವುವು ; (ತಳಿಯ ಪೂರ್ಣ ವಿವರ ನೀಡುವುದು)

(ಉ) ಭತ್ತಕ್ಕೆ ನೀಡುವ ಬೆಂಬಲ ಬೆಲೆ ಎಷ್ಟು ; ಬೆಂಬಲ ಬೆಲೆ ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ ? (ವಿವರ ನೀಡುವುದು)

## ಸರ್ಕಾರಿ ವಸತಿ ಗೃಹಗಳ ದುಸ್ಥಿತಿ

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೩೨೨ (೧೭೭೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ನಗರದಲ್ಲಿ ಸರ್ಕಾರಿ ವಸತಿ ಗೃಹಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ದುರಸ್ತಿಗೊಳಿಸಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಿಂದ ಸಿ ಮತ್ತು ಡಿ ಗುಂಪಿನ ನೌಕರರು ಮತ್ತು ಅಧಿಕಾರಿ ವರ್ಗದವರು ವಾಸಿಸುವ ಸರ್ಕಾರಿ ವಸತಿ ಗೃಹಗಳನ್ನು ದುರಸ್ತಿಗೊಳಿಸಲು ಎಷ್ಟು ವೆಚ್ಚ ಮಾಡಲಾಗಿದೆ ? (ವಿವರ ನೀಡುವುದು)

## ವಿಶ್ವಬ್ಯಾಂಕ್ ಯೋಜನೆಯಡಿ ನಾಲ್ಕು ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೩೨೩ (೧೭೫೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲದಿಂದ ಹನೂರು ಹಾಗೂ ಕೌದಳ್ಳಿ ಮಾರ್ಗ ಶ್ರೀ ಮಹದೇಶ್ವರ ಬೆಟ್ಟ ತಲುಪುವ ರಸ್ತೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ರಸ್ತೆಯಲ್ಲಿ ವಾಹನ ದಟ್ಟಣೆಯಿಂದ ಅಪಘಾತಗಳು ಹೆಚ್ಚಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಇ) ಸದರಿ ರಸ್ತೆಯನ್ನು ವಿಶ್ವಬ್ಯಾಂಕ್ ಯೋಜನೆಯಡಿ ನಾಲ್ಕು ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಯಾವ ಕಾಲಮಿತಿಯಲ್ಲಿ ಈ ಯೋಜನೆಗೆ ಚಾಲನೆ ಕೊಡಲು ಸರ್ಕಾರ ಕ್ರಮ ವಹಿಸುವುದು ?

## ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗುತ್ತಿರುವ ಅಪಘಾತಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೪ (೧೭೨೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಅಪಘಾತಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು ?

## ಇಂಧನ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೫ (೧೭೨೧) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಇಂಧನ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ವಿಭಾಗವಾರು ಮಾಹಿತಿ ನೀಡುವುದು)

(ಆ) ಸದರಿ ನೌಕರರಿಗೆ ವಾರ್ಷಿಕವಾಗಿ ನೀಡುತ್ತಿರುವ ವೇತನ ಎಷ್ಟು ; (ವಿವರ ನೀಡುವುದು)

(ಇ) ಈ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಅಪೆಕ್ಸ್ ಬ್ಯಾಂಕಿನ ಎ.ಟಿ.ಎಂ. ಕೇಂದ್ರಗಳು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೩೨೬ (೧೮೨೬) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಶಾಖೆಗಳಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು) ಅಪೆಕ್ಸ್ ಬ್ಯಾಂಕಿನ ಎ.ಟಿ.ಎಂ. ಕೇಂದ್ರಗಳು ಗ್ರಾಹಕರ ಅನುಕೂಲಕ್ಕೆ ಲಭ್ಯವಿದೆಯೇ ; (ತಿಳಿಸುವುದು)

(ಆ) ಬೆಂಗಳೂರು ನಗರದಲ್ಲಿ ಕೆಲವು ಸಹಕಾರಿ ಬ್ಯಾಂಕುಗಳು ಎ.ಟಿ.ಎಂ. ಕೇಂದ್ರಗಳನ್ನು ತೆರೆದು, ಸಾರ್ವಜನಿಕ/ಗ್ರಾಹಕರಿಗೆ ಅನುಕೂಲ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಬಹುತೇಕ ಎಲ್ಲಾ ಶಾಸಕರುಗಳು ಅಪೆಕ್ಸ್ ಬ್ಯಾಂಕ್‌ನ ಗ್ರಾಹಕರುಗಳಾಗಿದ್ದು, ಬ್ಯಾಂಕ್‌ನ ಯಾವುದೇ ಶಾಖೆಗಳಲ್ಲಿ ಎ.ಟಿ.ಎಂ. ಇಲ್ಲದೇ ಇರುವುದರಿಂದ ಸಾಮಾನ್ಯ ನಾಗರಿಕರು ಹಾಗೂ ಶಾಸಕರುಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಶಾಸಕರುಗಳಿಗೆ ಹಾಗೂ ಸಾಮಾನ್ಯ ಜನರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಬೆಂಗಳೂರು ಕೇಂದ್ರ ಸ್ಥಾನವನ್ನು ಮೊದಲ ಆದ್ಯತೆಯನ್ನಾಗಿ ಪರಿಗಣಿಸಿ, ಸದರಿ ಬ್ಯಾಂಕ್ ವತಿಯಿಂದ ಎ.ಟಿ.ಎಂ. ಕೇಂದ್ರಗಳನ್ನು ಸ್ಥಾಪಿಸಲು ಕ್ರಮವನ್ನು ಸರ್ಕಾರ ಕೈಗೊಳ್ಳಲಾಗುವುದೇ ?

## ಯಲಹಂಕ ತಾಲ್ಲೂಕು ಸರ್ವೆ ನಂ. ೫೫ರ ವಕ್ಫ್ ಜಮೀನು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) –**

೩೨೭ (೧೭೪೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೧೯೭೫ರಲ್ಲಿ ವಕ್ಫ್ ಆಸ್ತಿ ಎಂದು ಅಧಿಸೂಚಿತಗೊಂಡ ಯಲಹಂಕದ ಬೆಲ್ಲಹಳ್ಳಿಯ ಸರ್ವೆ ನಂ. ೫೫ರ ೧೫ ಎಕರೆ ಜಮೀನು ಕರ್ನಾಟಕ ಸರ್ಕಾರದ ಸಚಿವಾಲಯದ ೪ನೇ ದರ್ಜೆ ನೌಕರರ ಸಂಘಕ್ಕೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಿರುವುದು ನಿಜವೇ ;

(ಆ) ಹಂಚಿಕೆ ಮಾಡಿದ್ದಲ್ಲಿ, ಯಾವ ಮಾನದಂಡವನ್ನು ಅನುಸರಿಸಿ ಜಿಲ್ಲಾಧಿಕಾರಿಯವರು ಈ ಜಮೀನನ್ನು ಸದರಿ ಸಂಘಕ್ಕೆ ಹಂಚಿಕೆ ಮಾಡಿದೆ ;

(ಇ) ಈ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯವು ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿಯಿದ್ದರೂ ಕೂಡ ಸದರಿ ನೌಕರರ ಸಂಘಕ್ಕೆ ಹಂಚಿಕೆ ಮಾಡಲು ಕಾರಣವೇನು ;

(ಈ) ಬೆಂಗಳೂರು ನಗರದ ೧೮ ಕಿ.ಮೀ. ವರ್ತುಲದಲ್ಲಿರುವ ಸರ್ಕಾರಿ ಜಮೀನನ್ನು ಬೇರೆಯವರಿಗೆ ಹಂಚಿಕೆ ಮಾಡಬೇಕಾದರೆ ಸಚಿವ ಸಂಪುಟದ ಅನುಮೋದನೆ ಅಗತ್ಯವಿರುವುದು ನಿಜವೇ ; ನಿಜವಾದಲ್ಲಿ, ಸದರಿ ಯಲಹಂಕದ ಬೆಲ್ಲಳ್ಳಿಯ ಸರ್ವೆ ನಂ ೫೫ರ ಜಮೀನು ಕರ್ನಾಟಕ ಸರ್ಕಾರಿ ಸಚಿವಾಲಯದ ೪ನೇ [illegible] ನೌಕರರಿಗೆ ಹಂಚಿಕೆ ಮಾಡುವ ಪೂರ್ವ ಸಚಿವ ಸಂಪುಟ ಅನುಮೋದನೆ ಪಡೆಯಲಾಗಿದೆಯೇ ?

## ಸಮರ್ಪಕ ವಿದ್ಯುತ್ ಸರಬರಾಜು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨೮ (೧೭೬೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಕೋಟೆ ಪ್ರದೇಶದಲ್ಲಿ ನಿತ್ಯ ವಿದ್ಯುತ್ ಕಣ್ಣು ಮುಚ್ಚಾಲೆ ಆಡುತ್ತಿದ್ದು, ಇಲ್ಲಿನ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ನಿಜವೇ ;

(ಆ) ಈ ಕೋಟೆ ಪ್ರದೇಶದಲ್ಲಿ ಮಾತ್ರ ವಿದ್ಯುತ್ ಪ್ರವಹಿಸುವುದಕ್ಕಿಂತ, ವಿದ್ಯುತ್ ನಿಲುಗಡೆ ಸಮಯ ಹೆಚ್ಚಾಗಿರಲು ಕಾರಣಗಳೇನು ;

(ಇ) ಕಂಪ್ಲಿ ಪಟ್ಟಣಕ್ಕಿಂತ ಕೋಟೆ ಪ್ರದೇಶದಲ್ಲಿ ಹೆಚ್ಚಿನ ಸಮಯದ ವಿದ್ಯುತ್ ನಿಲುಗಡೆ ಆಗದಂತೆ ಈ ಪ್ರದೇಶಕ್ಕೆ ಸರಬರಾಜು ಮಾಡುವ ವಿದ್ಯುತ್ ಮಾರ್ಗವನ್ನು ಬದಲಿಸಿ ಸಂಪೂರ್ಣ ವಿದ್ಯುತ್ ಪೂರೈಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು ;

(ಈ) ಸದರಿ ಪ್ರದೇಶಕ್ಕೆ ಯಾವ ಮಾರ್ಗಗಳಿಂದ ವಿದ್ಯುತ್ ಪೂರೈಸಲಾಗುತ್ತಿದೆ ಎನ್ನುವ ವಿವರ ನೀಡುವುದು ;

(ಉ) ಈ ಕೋಟೆ ಪ್ರದೇಶಕ್ಕೆ ಬದಲಿ ಮಾರ್ಗದ ಮೂಲಕ ವಿದ್ಯುತ್ ಪೂರೈಸಲು ಬೇಕಾಗುವ ಅವಧಿ ಎಷ್ಟು ; ಆ ಅವಧಿಯಲ್ಲಿಯೇ ವಿದ್ಯುತ್ ಮಾರ್ಗ ಬದಲಾವಣೆ ಮಾಡಿ ಹಲವಾರು ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವ ಸಾರ್ವಜನಿಕರಿಗೆ ನಿರಂತರ ವಿದ್ಯುತ್ ಪೂರೈಸಿ ಅನುಕೂಲ ಮಾಡಿಕೊಡಲಾಗುವುದೇ ?

## ಹಾಪ್‌ಕಾಮ್ಸ್ ಸಿಬ್ಬಂದಿಗೆ ತುಟ್ಟಿಭತ್ಯೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೩೨೯ (೧೭೩೪) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಪ್‌ಕಾಮ್ಸ್‌ನಲ್ಲಿ ಒಟ್ಟು ಎಷ್ಟು ನೌಕರರಿದ್ದಾರೆ ;

(ಆ) ಹಾಪ್‌ಕಾಮ್ಸ್ ನೌಕರರಿಗೆ ನೀಡಬೇಕಾದ ತುಟ್ಟಿ ಭತ್ಯೆ ಬಾಕಿ ಇರುವುದು ನಿಜವೇ ? (ಇದ್ದಲ್ಲಿ, ವಿವರ ನೀಡುವುದು)

## ಈರುಳ್ಳಿ ಬೆಳೆಗೆ ನುಸಿರೋಗ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩೦ (೧೭೮೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಈರುಳ್ಳಿ ಬೆಳೆದಿರುವ ಕ್ಷೇತ್ರ ಎಷ್ಟು ; ಎಷ್ಟು ಇಳುವರಿಯನ್ನು ನಿರೀಕ್ಷಿಸಲಾಗಿದೆ ;

(ಆ) ಈರುಳ್ಳಿ ಬೆಳೆಗೆ ಥ್ರಿಬ್ಸ್ ನುಸಿ ರೋಗ ತಗುಲಿದ್ದು, ಎಷ್ಟು ಕ್ಷೇತ್ರದ ಬೆಳೆಗೆ ಇದರಿಂದ ಹಾನಿ ಆಗಿದೆ ; ಇದರಿಂದ ಇಳುವರಿ ಕುಸಿತ ಆಗಲಿದೆಯೇ ;

(ಇ) ಥ್ರಿಬ್ಸ್ ನುಸಿ ಕಾಟವನ್ನು ತಡೆಯಲು ಕೃಷಿ ಇಲಾಖೆ ಕೈಗೊಂಡಿರುವ ಕ್ರಮಗಳೇನು ; ರೈತರಿಗೆ ಯಾವ ರೀತಿ ನೆರವು ನೀಡಲಾಗುತ್ತಿದೆ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ8, ಕಾ.ಸೂ. 412, ಪ್ರತಿಗಳು 1000